



## ಹೆಡಿ ಲಮಾರ್ (1914-2000)



ಆಸ್ಟ್ರಿಯನ್–ಅಮೆರಿಕನ್ ಮಹಿಳೆ ಹೆಡಿ ಲಮಾರ್ ಹಾಲಿವುಡ್‌ನ ಬಹುಬೇಡಿಕೆ ನಟಿಯಾಗಿಯೂ ಹೆಸರು ಮಾಡಿದವರು. ನಟನೆ ಮಾತ್ರವಲ್ಲ, ಅನ್ವೇಷಣೆಗಳ ಕುರಿತು ಸದಾ ಯೋಚಿಸುತ್ತಿದ್ದ ಅವರು, ಸಂಗೀತಗಾರ ಜಾರ್ಜ್ ಆಂಥೆಯವರ ಜೊತೆಗೂಡಿ ಮಾಡಿದ ಸಂಶೋಧನೆ ತಂತ್ರಜ್ಞಾನದ ಹೊಸ ಹಾದಿಗೆ ಅಡಿಪಾಯ ಹಾಕಿಕೊಟ್ಟಿತ್ತು.

'Frequency Hopping' ತಂತ್ರಜ್ಞಾನ ಕಂಡುಹಿಡಿದ ಖ್ಯಾತಿ ಇವರದ್ದಾಗಿತ್ತು. ಕಂಪ್ಯೂಟರ್ ಯುಗದ ಮೊದಲಿಗೇ ಸಿದ್ಧಗೊಂಡ ರೇಡಿಯೊ ಸಿಗ್ನಲ್ ಇದಾಗಿದ್ದು, ಇದರ ಸಂವಹನ ಕ್ರಿಯೆ ಯಾವುದೇ ಶತ್ರುರಾಷ್ಟ್ರದ ಆಕ್ರಮಣ ಸಮಯದಲ್ಲಿ ರೇಡಿಯೊ ಜ್ಯಾಮಿಂಗ್ ಭೇದಿಸಲು ರೇಡಿಯೊ ಮಾರ್ಗದರ್ಶನ ನೀಡುವ ವ್ಯವಸ್ಥೆಯನ್ನು ಒಳಗೊಂಡಿತ್ತು. ಎರಡನೇ ವಿಶ್ವಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಈ ಅನ್ವೇಷಣೆ ಹೊಸ ಆಲೋಚನೆಯನ್ನೇ ಸೃಷ್ಟಿಸಿತ್ತು. ಆಧುನಿಕ ಜಗತ್ತಿನ ಡಿಜಿಟಲ್ ಸಂವಹನ ಸಾಧನಗಳಾದ ವೈಫೈ, ಬ್ಲೂಟೂತ್, ಸಿಗ್ನಲಿಂಗ್ ಸಾಧನಗಳಿಗೆ ಈ ತಂತ್ರಜ್ಞಾನವೇ ಅಡಿಪಾಯ. ಜಗತ್ತನ್ನೇ ಬದಲಿಸಿದ ತಂತ್ರಜ್ಞಾನದ ಪ್ರವರ್ತಕರಾದ ಹೆಡಿ ಅವರನ್ನು ಮರೆಯಲು ಸಾಧ್ಯವೇ ಇಲ್ಲ.

## ಜೋಸೆಫೀನ್ ಕೊಹೆರೆನ್ (1839-1913)




ಪಾತ್ರೆ ತೊಳೆಯಲು ಶ್ರಮ, ಸಮಯ ವ್ಯರ್ಥ ಮಾಡುವುದಕ್ಕಿಂತ, ಯಂತ್ರದಲ್ಲಿ ಆ ಕೆಲಸವನ್ನು ಮಾಡಿಸುವ ತಂತ್ರ ಕಂಡುಕೊಳ್ಳಲು ಮುಂದಾಗಿದ್ದು ಜೋಸೆಫೀನ್. ಯಂತ್ರ ಪಾತ್ರೆ ತೊಳೆಯಬೇಕು, ಜೊತೆಗೆ ಅದು ಅಷ್ಟೇ ಶುದ್ಧವಾಗಿರಬೇಕು ಎಂಬ ಉದ್ದೇಶದೊಂದಿಗೆ 'ಡಿಶ್ ವಾಷರ್' ಕಂಡುಹಿಡಿದವರು.

ವಾಷರ್ ತಳಕ್ಕೆ ದುಂಡನೆಯ ತಿರುಗು ಚಕ್ರ ಅಳವಡಿಸಿ ಅದರ ಮೇಲೆ ವಿವಿಧ ಪಾತ್ರೆಗಳನ್ನು ಇರಿಸಲು ಸೂಕ್ತ ಖಾನೆಗಳನ್ನು ಮಾಡಿ ಬಾಯ್ಲರ್ ಮೋಟಾರ್ ಚಾಲೂ ಮಾಡಿದಾಗ ಅದರಲ್ಲಿನ ನೀರು ಮತ್ತು ಸೋಪಿನ ದ್ರಾವಣದಿಂದ ಪಾತ್ರೆಗಳು ಶುದ್ಧಿಗೊಳ್ಳುವ ಮೂಲ ತಂತ್ರ ಇದಾಗಿತ್ತು.

1886ರಲ್ಲಿ ಇದರ ಪೇಟೆಂಟ್ ಕೂಡ ಜೋಸೆಫೀನ್ ಅವರಿಗೆ ದೊರೆಯಿತು. ಆದರೆ ಯಶಸ್ವಿ ಮಹಿಳೆಯಾಗಲು ಅವರ ದಾರಿಯಲ್ಲಿ ಸಾಕಷ್ಟು ಅಡೆತಡೆಗಳೇ ಎದುರಾದವು. ಇವೆಲ್ಲವುಗಳ ನಡುವೆ ಎದ್ದುನಿಲ್ಲಲೇಬೇಕೆಂಬ ಛಲವೂ ಹುಟ್ಟಿಕೊಂಡಿತ್ತು.

ಪೇಟೆಂಟ್ ಪಡೆಯುವುದರಿಂದ ಹಿಡಿದು ಅದನ್ನು ಮಾರಾಟ ಮಾಡುವವರೆಗೂ ಒಂದಲ್ಲಾ ಒಂದು ಸಮಸ್ಯೆಯನ್ನು ಎದುರಿಸಿದರು. ಕೊನೆಗೂ ಶ್ರಮಕ್ಕೆ ತಕ್ಕ ಫಲ ದೊರೆಯಿತು. ಈ ಡಿಶ್ ವಾಷರ್ ಜನಪ್ರಿಯಗೊಂಡು ಹಲವು ಪ್ರಶಸ್ತಿಗಳೂ ಸಂದವು. ಇಂದಿಗೂ ದೊಡ್ಡ ದೊಡ್ಡ ಹೋಟೆಲ್–ವಾಣಿಜ್ಯ ಸಂಕೀರ್ಣಗಳಲ್ಲಿ ಬಳಸಲಾಗುತ್ತಿರುವ ಡಿಶ್ ವಾಷರ್‌ನ ಮೂಲ ಜೋಸೆಫೀನ್ ಸಂಶೋಧನೆ.

## ರೂಥ್ ಗ್ರೇವ್ಸ್ ವೇಕ್‌ಫೀಲ್ಡ್ (1903-1977)



ಈಕೆಯ ಸಂಶೋಧನೆಯಂತೂ ಮನೆ ಮಂದಿಗೆಲ್ಲ ವಯಸ್ಸಿನ ಭೇದಭಾವವಿಲ್ಲದೇ ರಸನ ತಣಿಸಬಲ್ಲ ಚಾಕೊಲೇಟ್ ಬಿಸ್ಕೆಟ್ (Chocolate cookies). ಅಮೆರಿಕನ್ ಪಾಕ ಪ್ರವೀಣೆಯಾಗಿದ್ದ ರೂಥ್ ಗ್ರೇವ್ಸ್ ವೇಕ್‌ಫೀಲ್ಡ್, ಚಾಕೊಲೇಟ್ ಬಿಸ್ಕೆಟ್ ಎಂಬ ಹೊಸ ತಿನಿಸನ್ನು ಪ್ರಯೋಗಿಸಿ ಜನಪ್ರಿಯರಾದವರು. ಆ ಕಾಲದಲ್ಲಿ ಮೋಟಾರು ವಾಹನಗಳ ಬದಲಿಗೆ ಅಶ್ವಾರೋಹಿ ಸವಾರರು ಓಡಾಡುತ್ತಿದ್ದರು. ಇವರು ಟೋಲ್‌ನಲ್ಲಿ ವೇಕ್‌ಫೀಲ್ಡ್‌ರವರ ಭೋಜನಾಲಯದಲ್ಲಿ ಭೋಜನ ಮಾಡಿ ಮುಂದಿನ ಪ್ರಯಾಣ ಮಾಡುತ್ತಿದ್ದ ಕಾಲ. ಇಲ್ಲಿ ಬರುವ ಗ್ರಾಹಕರಿಗೆ ಹೊಸ ರುಚಿ ನೀಡುವ ಉದ್ದೇಶದಿಂದ ಇವರು ತಯಾರು ಮಾಡುತ್ತಿದ್ದುದು ಚಾಕೊಲೇಟ್ ಕುಕೀ. ಇಂದಿಗೂ ಚಾಕೊಲೇಟ್ ಬಿಸ್ಕೆಟ್ ಸವಿಯುವವರ ಸಂಖ್ಯೆಯೇನು ಕಡಿಮೆ ಇದೆಯೇ?

## ಮೆರಿಯನ್ ಡಾನೊವೆನ್ ( 1917-1998)



ಮೆರಿಯನ್ ಡಾನೊವೆನ್ ಎಂಬ ಮಹಿಳಾ ಉದ್ಯಮಿಯ ಆವಿಷ್ಕಾರ ಇಂದಿಗೂ ಚಾಲ್ತಿಯಲ್ಲಿರುವ ಜನಪರ ಸಂಶೋಧನೆಗಳಲ್ಲಿ ಒಂದು. ತನ್ನ ಮಗಳು ಹಾಸಿಗೆ ಒದ್ದೆ ಮಾಡಿದಾಗ ಸ್ವಚ್ಛಗೊಳಿಸಲು ಅನುಭವಿಸುತ್ತಿದ್ದ ಕಷ್ಟವನ್ನು ನಿವಾರಿಸಿಕೊಳ್ಳಲು ತಯಾರು ಮಾಡಿದ್ದು ತೇವನಿರೋಧಕ ವಸ್ತ್ರ– ಅಂದರೆ, ಡೈಪರ್ (Baby diaper).

ಇದಕ್ಕಾಗಿ ಇವರು ಉಪಯೋಗ ಮಾಡಿದ್ದು ತೇವ ನಿರೋಧಕ ಶವರ್ ಕರ್ಟೇನ್ ಬಟ್ಟೆ ಮತ್ತು ಹತ್ತಿ ಬಟ್ಟೆಗಳನ್ನು. ಈ ಡೈಪರ್ ಕವರ್ ಅನ್ನೇ 'ಬೋಟರ್' ಎಂದು ಕರೆದರು. 1949ರಲ್ಲಿ ಇವರ ವಾಟರ್‌ಪ್ರೂಫ್ ಡೈಪರ್ ಕವರ್ ಭಾರೀ ಜನಪ್ರಿಯತೆ ಪಡೆದುಕೊಂಡಿತು. ತಾವೇ ಇದರ ಉತ್ಪಾದನೆಯನ್ನೂ ಆರಂಭಿಸಿದರು ಮೆರಿಯನ್.

ಅದಾದ ಕೆಲ ವರ್ಷಗಳ ನಂತರ ಪೇಪರ್ ಡೈಪರ್‌ಗಳನ್ನು ಕಂಡುಹಿಡಿದರು. ಈಗ ಲಭ್ಯವಿರುವ ಡೈಪರ್‌ನ ಮೂಲ ಆ ಕಾಲದಲ್ಲೇ ಇತ್ತು ಎಂದರೆ ಅಚ್ಚರಿಯಾಗದೆ ಇರದೇ? ಈಗ ಚಿಕ್ಕ ಮಕ್ಕಳಿಗಷ್ಟೇ ಅಲ್ಲದೆ ಹಲವು ರೀತಿಯ ದೈಹಿಕ ಅನನುಕೂಲಗಳೂ ಸೇರಿದಂತೆ ಕೆಲವು ಹಿರಿಯರ ದೈಹಿಕ ಸಮಸ್ಯೆಗಳಿಗೂ ಈಗ (Adult Diaper) ಅವಶ್ಯವೆನಿಸಿದೆ.